ಮೂಲ ದಾವಾ ನಂಃ 72/2017

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **23-07-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಆರ್.ಎನ್ ವಕೀಲರಿಂದಃ**

ನಾವು 559 ಕ ಸರ್ವೇ ನಂಬರನಲ್ಲಿ ವಾಸವಿದ್ದೇವೆ. ಸದರಿ ಸ್ಥಳದ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರಿದೆ. ಸದರಿ ಸ್ಥಳವು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದಾಗ ನನ್ನ ಹೆಸರಿಗೆ ಮಂಜೂರಾಗಿದೆ. ಸದರಿ ಸ್ಥಳವು ಅಂದಾಜು 4-5 ವರ್ಷದ ಹಿಂದೆ ನನ್ನ ಹೆಸರಿಗಾಗಿದೆ. ನಾವು ಡಾ. ಶಿವರವರ ವಿರುದ್ಧ ಈ ಹಿಂದೆ ದಾವೆಯನ್ನು ದಾಖಲಿಸಿದ್ದೇವೆ. ನಮ್ಮ ಹೆಸರಿಗೆ ದಾವಾ ಸ್ಥಳ ಆಗಬೇಕೆಂಬುದಾಗಿ ಆ ದಾವೆಯನ್ನು ದಾಖಲಿಸಿದ್ದೇವು. ಸದರಿ ಆ ದಾವೆಯಲ್ಲಿ ಸರ್ವೇ ನಂಬರ್ 559 ರ ಸ್ಥಳದ ಬಗ್ಗೆ ನಕಾಶೆಯನ್ನು ಮಾಡಿಕೊಟ್ಟಿದ್ದು ಇರುವುದಿಲ್ಲ. ನಮ್ಮ ಸ್ಥಳವು ನಿರ್ದಿಷ್ಟವಾಗಿ ಎಲ್ಲೆಲ್ಲಿ ಬರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ. ನಮ್ಮ ಸ್ಥಳದ ಸುತ್ತಲೂ ಬೇಲಿ ಹಾಗೂ ಕಂಪೌಂಡ್ ಇದ್ದು, ಅದು ನನ್ನ ತಂದೆಯ ಕಾಲದಿಂದಲೂ ಇದೆ.

ಪ್ರಸ್ತುತ ದಾವೆಯನ್ನು ನಾನು ದಾರಿಯ ಸಲುವಾಗಿ ಹೂಡಿದ್ದೇನೆ. ನಾವು ತಿರುಗಾಡಲಿಕ್ಕೆ 4 ಫೂಟ್ ದಾರಿಯಿತ್ತು, ಅದಕ್ಕೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿದ್ದೇವೆ. ಸದರಿ ದಾರಿಯು ನಮ್ಮ ಸ್ಥಳದ ಪೂರ್ವ ದಿಕ್ಕಿಗೆ ಇರುತ್ತದೆ.

ಈ ಹಿಂದೆ ನಾವು ಡಾ. ಶಿವರವರ ಮೇಲೆ ಹೂಡಿದ ದಾವೆಯಲ್ಲಿ ಸದರಿ ದಾರಿಯ ಬಗ್ಗೆ ಹೇಳಿದ್ದು ಇರುವುದಿಲ್ಲ. ಸದರಿ ದಾವೆಯಲ್ಲಿ ದಾರಿಯ ಬಗ್ಗೆ ಹೇಳಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ . ನಾವು ಸರ್ವೇ ನಂಬರ್ 559 ರ ಸ್ಥಳದಲ್ಲಿ 4 ಫೂಟ್ ನ ದಾರಿ ಇಲ್ಲದೇ ಇರುವುದರಿಂದ ನಾವು ಈ ಹಿಂದಿನ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

ಸದರಿ 4 ಫೂಟ್ ದಾರಿಯು ಮಾಡಗೇರಿ ಕಡತೋಕಾ ಪಂಚಾಯತ್ ರಸ್ತೆಯಿಂದ ನಮ್ಮ ಮನೆಯ ಮುಂದೆ ಹಾದು ಹೋಗಿರುತ್ತದೆ. ಸದರಿ ಮಾಡಗೇರಿ ಕಡತೋಕಾ ರಸ್ತೆಯು ಪೂರ್ವದಿಂದ ಪಶ್ಚಿಮಕ್ಕೆ ಹಾದು ಹೋಗಿದೆ. ನಮ್ಮ ಮನೆಯ ಹತ್ತಿರ ಇರುವ 4 ಫೂಟ್ ದಾರಿಯು ಪೂರ್ವದಿಂದ ಪಶ್ಚಿಮಕ್ಕೆ ಹಾದು ಹೋಗಿದೆ. ನಮ್ಮ ಮನೆಯ ಪೂರ್ವ ದಿಕ್ಕಿಗೆ ಗೌರಿರವರ ಜಾಗವಿದ್ದು , ಪಶ್ಚಿಮ ದಿಕ್ಕಿಗೆ ನಮ್ಮ ತಮ್ಮನಾದ ಶಂಕರವರ ಮನೆ ಇರುತ್ತದೆ. ನಮ್ಮ ಮನೆಯ ಉತ್ತರ ದಿಕ್ಕಿಗೆ ಯಾಗ ಜಾಗ ಇದೆ ಎಂದಾಗ , ಸಾಕ್ಷಿಯು ಸುಮ್ಮನಿರುತ್ತಾರೆ. ದಕ್ಷೀಣಕ್ಕೆ ಗಾಡಿ ನಾರಾಣಯರವರ ಮನೆ ಇರುತ್ತದೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ಸದರಿ ಕಡತೋಕಾ ಮಾಡಗೇರಿ ಮುಖ್ಯ ರಸ್ತೆಯಿಂದ ನಮ್ಮ ಮನೆಯು ಅಂದಾಜು 4-5 ಮಾರ್ ದೂರದಲ್ಲಿದೆ.

ಪ್ರತಿವಾದಿಯ ಮನೆಯ ಸುತ್ತಲೂ ಬೇಲಿ ಇದೆ. ಸದರಿ ಬೇಲಿಯ ಸ್ವಲ್ಪ ಜಾಗದಲ್ಲಿ ಕಲ್ಲಿನಿಂದ ಕೂಡಿರುತ್ತದೆ. ಪ್ರತಿವಾದಿಯರ ಜಾಗವು ರಸ್ತೆಗೆ ತಾಗಿಕೊಂಡಿದೆ ಎಂದರೆ ಸರಿ. ಪ್ರತಿವಾದಿಯು ತನ್ನ ಮನೆಗೆ ಒಳಗೆ ಹೋಗಲು ಕಬ್ಬಿಣದ ಗೇಟ್ ನ್ನು ಅಳವಡಿಸಿದ್ದಾನೆ. ಪ್ರತಿವಾದಿಯ ಮನೆಯ ಉತ್ತರ ದಿಕ್ಕಿಗೆ ಆ ಗೇಟ್ ಇರುತ್ತದೆ. ಪ್ರತಿವಾದಿಯ ಮನೆಯ ಸುತ್ತಲೂ ಇರುವ ಕಂಪೌಂಡಗೆ ಅದೊಂದೇ ಗೇಟ್ ಇರುತ್ತದೆ. ನಾನು ನಮ್ಮ ವಕೀಲರ ಮುಂದೆ ಕಂಪೌಂಡ್ ಮಧ್ಯದಲ್ಲಿ 4 ಫೂಟ್ ನ ದಾರಿ ಇರುವುದಾಗಿ ಹೇಳಿದ್ದೆನು. ನನಗೆ ದಿಕ್ಕಿನ ಬಗ್ಗೆ ಸರಿಯಾಗಿ ಮಾಹಿತಿ ಇರುವುದಿಲ್ಲ.

ನಾವು ಸದರಿ ದಾವೆಯನ್ನು ದಾಖಲಿಸುವಾಗ ನಕಾಶೆಯನ್ನು ಹಾಜರುಪಡಿಸಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಗೆ ನಕಾಶೆಯನ್ನು ತೋರಿಸಿದಾಗ , ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ನಕಾಶೆಯನ್ನು ಬಿಡಿಸಲು ನಾನು ಮಾಹಿತಿಯನ್ನು ನೀಡಿರುತ್ತೇನೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ.

ಪ್ರತಿವಾದಿಯ ಮನೆಯ ಪೂರ್ವ ದಿಕ್ಕಿಗೆ ಸದರಿ 4 ಫೂಟ್ ನ ದಾರಿ ಇದೆ ಎಂಬುದಾಗಿ ನಮ್ಮ ವಕೀಲರಿಗೆ ನಾನೇ ಹೇಳಿದ್ದೆನು. ಸದರಿ ದಾರಿಯ ಒಂದು ಬದಿಯಲ್ಲಿ ಗೌರಿಯ ಮನೆ ಹಾಗೂ ಇನ್ನೊಂದು ಬದಿಯಲ್ಲಿ ಪ್ರತಿವಾದಿಯ ಮನೆ ಇದೆ. ಸದರಿರವರ ಎರಡು ಮನೆಯ ಮಧ್ಯದಲ್ಲಿ ಆ ದಾರಿ ಇದೆ. ಸದರಿ ಜಾಗಕ್ಕೆ ಪ್ರತಿವಾದಿಯು ತನ್ನ ಗೋಡೆಯ ಮೇಲೆ ತಗಡ್ ನ್ನು ಹಾಕಿ ದಾರಿಗೆ ಒರೆಯಾಗಿ ಬೀಳುವಂತೆ ಹಾಕಿದ್ದಾನೆ.

ಗೌರಿಯ ಮನೆಯು ಸರ್ವೆ ನಂಬರ್ 559 ರಲ್ಲಿ ಬರುತ್ತದೆ, ಅದು 14 ಆನೆ ಜಾಗವಾಗಿದೆ. ನಮ್ಮ ವಕೀಲರಿಗೆ ಗೌರಿ ಮನೆಯನ್ನು ತೋರಿಸಿದ್ದೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.